dd-353
T.R-2

51st Year of Publication ★ SATYAVADI Daily, MYSORE 4

Reg No B G 155 13-8-1968

ಮುಂ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂಡಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹೈ ಕೋರ್ಟಿಗೆ ವಕೀಲರ ಬಹಿಷ್ಕಾರ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ತೆನ್ಮಾರವರು, ಶ್ರೀ ಎಂ. ಬಿ ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮುನಿಸಿಪಲ್ ಮಾಟಂಗಿನಲ್ಲಿ ಹೊಡೆದಾಟ

ಕಲ್ಕತ್ತಾ— ಮುನಿಸಿಪಲ್ ಕಾರ್ಪೊರೇಷನ್ನಿನ ಡೆಪ್ಯೂಟಿ ಮೇಯರ್ ಶ್ರೀ ಖಣ್ಣರ ಮೇಲಿನ ಅವಿಶ್ವಾಸ ಸೂಚನೆಯನ್ನು ಪರ್ಯಾಲೋಚಿಸಲು ನಿನ್ನೆ ನಡೆದ ಸಭೆಯಲ್ಲಿ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳಲ್ಲಿ ಹೊಡೆದಾಟವಾಗಿ ಡೆಪ್ಯೂಟಿ ಮೇಯರರ ತಲೆಗೆ ಏಟುಬಿದ್ದು ಅವರ ಬಟ್ಟೆಯನ್ನು ಹರಿಯಲಾಯಿತು.

ಹೆಬ್ಬಕ್ಕೆ ಅಡ್ವಾನ್ಸು

ಬೆಂಗಳೂರು— ರೂ. 500 ಮತ್ತು ಅದಕ್ಕೆ ಕಡಮೆ ಸಂಬಳದ ಎಕ್ಸ್ ಜಿ ಓ ಗಳಿಗೆ ಗೌರಿ-ಗಣೇಶ ಹಬ್ಬದ ಪ್ರಯುಕ್ತ ರೂ. 30 ಅಡ್ವಾನ್ಸನ್ನು ಸರಕಾರ ಮಂಜೂರ್ಮಾಡಿದೆ.

★

ನೀರಿನ ವ್ಯಾಜ್ಯದ ಮಸೂದೆ

ನವದೆಹಲಿ— ಅಂತರ್ರಾಜ್ಯ ನೀರಿನ ವ್ಯಾಜ್ಯಗಳಲ್ಲಿ ಮೂರು ಮಂದಿಯ ನ್ಯಾಯಾಂಗ ಪುಂಡಲಿ ರಚನೆಯ ಮಸೂದೆ ರಾಜ್ಯಸಭೆಯಲ್ಲಿ ಮಂಜೂರಾಯಿತು.

★

ಅಖಂಡ ಭಾರತ

ಹೈದರಾಬಾದು— ಭಾರತ-ಪಾಕಿಸ್ತಾನ ಏಕೀಕರಣವಾಗಿ "ಅಖಂಡ ಭಾರತ" ಸ್ಥಾಪನೆಯೇ ಜನಸಂಘದ ಗುರಿ ಎಂದು ಜನಸಂಘದ ಅಧ್ಯಕ್ಷ ಶ್ರೀ ವಾಜಪೇಯಿ ಹೇಳಿದರು.

★

ದಾಖಲಾತಿ ಬೆಳೆ

ಮಂಡ್ಯ— ಶ್ರೀ ಅಂದಾನಿಗೌಡರಿಗೆ ಸೇರಿದ 1 ಎಕ್ರೆ ಭೂಮಿಯಲ್ಲಿ 112.882 ಮಿಟ್ರಿಕ್ ಟನ್ ಕಬ್ಬು ಬೆಳೆದಿದೆ.

★

ಎಲ್ಲರಿಗೂ ಒಂದೇ ರೀತಿ

ಹೈದರಾಬಾದು— ಅನಾವೃಷ್ಟಿ ಬಗ್ಗೆ ಇತರ ಕಡೆಗೆ ನೀಡಿರುವ ನೆರವನ್ನೆ ಆಂಧ್ರ ಪ್ರದೇಶಕ್ಕೂ ನೀಡಲಾಗುವದೆಂದು ಉಪ ಪ್ರಧಾನಿ ದೇಸಾಯರವರು ಹೇಳಿದರು.

★

ನವದೆಹಲಿ— ಕೋಮುವಾರು ಹೈಷಪ್ಯ ಕುದಿರುಸುವ ಪತ್ರಿಕೆಗಳನ್ನು ಸ್ಪಾಸಿಕ್ಯೂಟ್ ಮಾಡುವಂತೆ ಕೇಂದ್ರವು ರಾಜ್ಯ ಸರಕಾರಗಳಿಗೆ ತಿಳಿಸಿದೆ.

ರೈಲು ನಿಲ್ಲಿಸಲಾಗಿದ್ದ ಪ್ರಸಂಗ

ನವದೆಹಲಿ— 1964 ರಿಂದ ಅತಿ ಪ್ರಮುಖ ಗಣ್ಯರ ಸೌಕರ್ಯಕ್ಕಾಗಿ ನಿಗದಿಯಲ್ಲದ ಸ್ಥಳಗಳಲ್ಲಿ ನಾಲ್ಕು ಸಾರಿ ಎಕ್ಸ್ಪ್ರೆಸ್ ಮತ್ತು ಮೇಲ್ ರೈಲುಗಳು ನಿಲ್ಲಿಸಪಟ್ಟಿದ್ದವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

★

ಪ್ರವಾಹ ಹಾವಳಿ

ನವದೆಹಲಿ— ಪ್ರವಾಹಕ್ಕೆ ತುತ್ತಾಗ ಬಹುದಾದ ನದಿ ಪಡ ಮತ್ತಿತರ ಭಾಗಗಳಲ್ಲಿ ಜನರು ವಾಸಿಸುವುದನ್ನು ಪ್ರತಿಬಂಧಿಸುವ ಶಾಸನವನ್ನು ಸರಕಾರ ಶೀಘ್ರದಲ್ಲಿಯೆ ತರಲಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು — ಗುಜರಾತು ಮತ್ತಿತರ ಕಡೆಗಳಲ್ಲಿಯ ನೆರೆಹಾವಳಿ ಬಗ್ಗೆ ರಾಜಕೀಯ ಯೋಚ್ಛನೆಗಳಿಂದ ಮಾಡಬಾರವೆಂದು ಪ್ರಧಾನಿಯವರೂ ನೀಡಾವರಿ ಮಂತ್ರಿಯವರೂ ತಿಳಿಸಿದರು — ಪ್ರವಾಹದಿಂದ ದೇಶದಲ್ಲಿ ರೂ. 22 ಕೋಟಿ ಬೆಳೆ ನಷ್ಟವಾಗಿದೆಯೆಂದು ತಿಳಿಸಲಾಯಿತು — ಉಕ್ಕಾ ಸ್ಪಾಜೆಕ್ಟನ್ನು ಮುಗಿಸುವ ಪ್ರಶ್ನೆಯನ್ನು ಪ್ಲಾನಿಂಗು ಕಮಿಷನ್ನಿನೊಡನೆ ತೆಗೆದುಕೊಳ್ಳಲಾಗುವದೆಂದು ತಿಳಿಸಲಾಯಿತು — ಅಮೆರಿಕಾದಲ್ಲಿ ಪ್ರಹಾವ ಭಾಗವು 48 ಮಿಲಿಯ ಎಕ್ರೆ ಎಂದೂ, ಭಾರತದಲ್ಲಿ 50 ಮಿಲಿಯ ಎಕ್ರೆ ಎಂದೂ ತಿಳಿಸಲಾಯಿತು — ಅಮೇರಿಕಾದಲ್ಲಿ ಶೇಕಡಾದ 40 ಭಾಗವನ್ನು ರೂ. 4000 ಕೋಟಿ ಖರ್ಚಿನಿಂದ ಸರಿಪಡಿಸಕೊಳ್ಳಬೇಕಾಯಿತು ; ಭಾರತವು ಶೇಕಡ 25 ಭಾಗವನ್ನು ರೂ. 190 ಕೋಟಿ ವ್ಯಯದಿಂದ ಸರಿಪಡಿಸಿಕೊಂಡಿದೆ ಎಂದೂ ತಿಳಿಸಲಾಯಿತು — ಪ್ರವಾಹ ಮತ್ತು ಕ್ಷಾಮ ಪರಿಹಾರ ನಿಧಿ ಸ್ಥಾಪಿಸಬೇಕೆಂದು ಒಬ್ಬ ಸದಸ್ಯರು ತಿಳಿಸಿದ್ದನ್ನು ಪ್ರಧಾನಿಯವರು ಒಪ್ಪಿದರು.

★

ಹೈಕೋರ್ಟಿನ ಬಹಿಷ್ಕಾರ

ಕಲ್ಕತ್ತ— ಕಲ್ಕತ್ತಾದ ಪ್ರಮುಖ ನ್ಯಾಯಾಧೀಶ ಶ್ರೀ ಸಿನ್ಹರು ತಮಗೆ ಮಾಡಿದ ಅನ್ಯಾಯವನ್ನು ಪ್ರತಿಭಟಿಸಿ, ನಿನ್ನೆ ಅಡ್ವೊಕೇಟರುಗಳು ಹೈಕೋರ್ಟಿನ ಎಲ್ಲಾ ನ್ಯಾಯಾಸ್ಥಾನಗಳನ್ನೂ ಬಹಿಷ್ಕರಿಸಿದರು — ಜಡ್ಜರ ನೇಮಕ ಬಗ್ಗೆ ಅವರು ಚೀಫ್ ರಿಪ್ಪರುಗಳ ಪಕ್ಷಪಾತ ತೋರಿಸುತ್ತಿರುವರೆಂದು ಆಪಾದನೆ — ಈ ಚೀಫ್ ಜಸ್ಟಿಸರ ಸರಣಿ ಬೇರೆ ಕಡೆಗೆ ವರ್ಗಾಯಿಸಲ್ಪಡುವವರೆಗೆ ಇಂದಿನಿಂದ ಚೀಫ್ ಜಸ್ಟಿಸರ ಕೋರ್ಟಿಗೆ ಬಹಿಷ್ಕಾರ ಹಾಕುವರು.

★

ಶಿವಸೇನೆ ನಾಯಕನಿಗೆ ಶಿಕ್ಷೆ

ಬೊಂಬಾಯಿ— ಥಾಣಾದಲ್ಲಿ ಕಳೆದ ನವೆಂಬಳು 12 ರಂದು ಉದ್ರೇಕ ಭಾಷಣ ಮಾಡಿದ ಶಿವ ಸೇನಾ ನಾಯಕ ಬಾಲ್ ಥಾಕರೆಗೆ 15 ದಿನ ಸಾದಾ ಸಜಾ ವಿಧಿಸಲಾಯಿತು.

●

ಹಾಲು ಉತ್ಪಾದನಾ ಸಂಘ

ಬೀದರ್— ಥಾಣಾಕುಶ್ನೂರಿನಲ್ಲಿ ಹಾಲು ಉತ್ಪಾದನಾ ಸಂಘವನ್ನು ಪಶುಪಾಲನಾ ಮಂತ್ರಿ ಶ್ರೀ ಶಂಕರರಾಯರು ಸೋಮವಾರ ಉದ್ಘಾಟಿಸಿದರು — ಔರದ್ ತಾಲ್ಲೂಕಿನಲ್ಲಿ ಪಶು ತಳಿ ಕ್ಷೇತ್ರ ಸ್ಥಾಪಿಸಲು ಯೋಜಿಸಿರುವದಾಗಿ ತಿಳಿಸಿದರು.

●

ಮದರಾಸು— ಬೊಂಬಾಯಿ-ಪೂನಾ ರಸ್ತೆಯಲ್ಲಿ ನಾಲ್ಕು ದಿನಗಳಿಂದ ಎಡೆಬಿಡದೆ ಮಳೆ ಸುರಿಯುತ್ತಿದ್ದು, ಭಾನುವಾರ ವೇಗವಾಗಿ ಹೋಗುತ್ತಿದ್ದ ಒಂದು ಕಾರನ್ನು ಎಕ್ಸೈಜಿನವರು ಬೆನ್ನಟ್ಟಿ ಹಿಡಿದು ಅದರಲ್ಲಿದ್ದ 4 ಸಾಗರ ತೊಲಾ ವಶಪಡಿಸಿಕೊಂಡು ಬಂಧಿಸಿದರು.

ನವದೆಹಲಿ— ಅಂತರರಾಜ್ಯ ನೀರಿನವ್ಯಾಜ್ಯಗಳಲ್ಲಿ ಮೂರು ಮಂದಿಯ ನ್ಯಾಯಿಯಾಂಗ ಮಂಡಳಿ ರಚನೆಯ ಮಸೂದೆ ರಾಜ್ಯಸಭೆಯಲ್ಲಿ ಮಂಜೂರಾಯಿತು.

ಈ ಚಿತ್ರ ಜೋಳಕ್ಕೆ ಹತ್ತುವ ತಿಗಣೆಯದು
ಇದನ್ನು ಹಿಂದಿನ ಪುಟದಲ್ಲಿ ಕೊಟ್ಟಿದೆ



Quality Print 2 — Neat Binding
Lakshminarasimha Press
Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka agadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies Padmabhushana Dr. M. C. Modi, Dr. R S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಆಶೋಕ ಏಜೆನ್ಸೀಸ್
ಲಾಸ್ಟಾರ್ಸ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧದ ಆಯುರ್ವೇದ ಔಷಧಗಳಿಗಾಗಿ ಸಂಪರ್ಕಿಸಿರಿ

ಪುಡ್‌ಲಾಂಡ್ 9-8-68 ರಿಂದ
ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ —
— ಫಜ್ —
ಈಸ್ಟ್‌ಮನ್ ಕಲರ್
ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ, ಮುಕ್ರಿ, ಅಗಾ ಮುಂತಾದವರು
ಸಂಗೀತ —
ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— ಜನಪ್ರಿಯ 6 ನೇ ವಾರ
ಬಹುತಾರಾಕರ್ಷಕ ಕನ್ನಡ ಚಿತ್ರ
ನಮ್ಮ ಊರು
ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯ ಜಗದ್ಗುರು ಮಹಾಶಕ್ತಿಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಶಕ್ತಿಸ್ವಾಮಿಗಳವರ ಅಮೂಲ್ಯ ಅನುಗ್ರಹ ಕೃಪೆಯಾಗಿದೆ.

ಕನ್ನಡನಾಡಿನಲ್ಲಿ ಗೋರಕ್ಷಣೆ, ಪತ್ರಿಕೆಯ, ತಾಲೂಕಾದ್ಯಂತ, ಪಶುವೈದ್ಯ, ಸಮಾಚಾರಗಳ ವೈಶಿಷ್ಟ್ಯ ಪೂರ್ಣ ಮಾಸಪತ್ರಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆ ಹೃದಯಸ್ಪರ್ಶಿ ವಿಷಯ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿತಿ ಕಳಿಸಿಲ್ಲದಿರುವವರು ಇವರ್ಷ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ.ಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಭವನ, ಹೊಂಗಸಂದ್ರ
ಗೋರಕ್ಷಣ ಆಫೀಸು ಸತ್ಯವಾದಿಪೇಟೆ ಚಾಮರಾಜಪುರಂ ಮೈಸೂರು 4

ವಿಳಾಸ—ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ಮಾಡುವುದರಿಂದ ಆಗುವ ಲಾಭಗಳು ಹೆಚ್ಚು ಹಾನಿಯಿಲ್ಲ

Edited, Printed & Published by Dharmaprachare Nirate M S Krishna Rao (Proprietor) at the Satyavadi Press Chamarajapuram, Mysore 4